

ಗಮ್ಮತ್ತಿರುವುದೇ ಮೂಳೆಗಳನ್ನು ಬಿಡಿಸುವಾಗ ಮತ್ತು ಅವುಗಳನ್ನು ಚೀಪುವಾಗ.

ಜಾತ್ರೆಗೆ ಬಂದ ಬಂಧುಗಳಿಗೆ ಮುದ್ದೆ ಕಡಿಮೆ ಇಟ್ಟು ಮಾಂಸ ಹೆಚ್ಚು ನೀಡಿದರೆ ಮಾತ್ರ ಆ ಮಾನಿನಿಗೆ ಹೆಸರು ಬಂದಂತೆ. ಇಲ್ಲವೆಂದರೆ ಆಕೆಯ ಕೈಗೆ ಕರಿನಾಗರಿನಿಂದ ಕಚ್ಚಿಸುವ ಮಾತುಗಳು ಬಂದು, ಅವಳ ತೇಜೋವಧೆ ಇಡೀ ಸಮುದಾಯಕ್ಕೆ ಹಬ್ಬಿ, ಮಾನಿನಿಯ ಮಾನಹರಣವಾಗಿ ತಲೆತಗ್ಗಿಸುವ ಸ್ಥಿತಿ ಗ್ಯಾರಂಟಿ. ಈ ಕಾರಣಕ್ಕಾಗಿಯೇ ಆ ಮನೆಗೆ ಮದುವೆಯಾಗಿ ಹೊಸದಾಗಿ ಬಂದ ಸೊಸೆಯರು ಜಾತ್ರೆಯ ದಿನ ಮಾಂಸದೂಟ ಬಡಿಸುವ ಹೋರಾಟದ ಕಾಳಗಕ್ಕೆ ಇಳಿಯುವುದಿಲ್ಲ. ಯಾರಾದರೂ ರಾತ್ರಿ ಕಂಡ ಬಾವಿಗೆ ಹಗಲು ಬೀಳುವುದುಂಟೆ? ಆದ್ದರಿಂದ ಆ ಉಸಾಬರಿ ಏನಿದ್ದರೂ ಬಿಳಿಯ ತಲೆಯ ಹೆಗ್ಗಡತಿಯರದ್ದೆ.

ಸರ್ಕಾರಿ ನೌಕರಿ ಹಿಡಿದು ಎನ್.ಆರ್. ಪುರಕ್ಕೆ ಹೋದಾಗ ಮೀನು ತಿನ್ನುವುದನ್ನು ಕಲಿತೆ. ಕುವೆಂಪುವಿಗೆ ಮೀನೆಂದರೆ ಪಂಚಪ್ರಾಣವಾಗಿತ್ತಂತೆ. ನನಗೇಕೊ ಅದು ಈಗಲೂ ಮಾಂಸದಂತೆ ಫೀಲ್ ಆಗುವುದಿಲ್ಲ. ತರೀಕೆರೆಗೆ ಬಂದಾಗ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೆ ಇದ್ದ 'ಚೌಡೇಶ್ವರಿ ಮಿಲಿಟರಿ ಹೋಟೆಲ್'ಗೆ ನಾವು ಮಂಗಳವಾರದ ಕಾಯಂ ಅತಿಥಿಯಾಗಿದ್ದೆವು. ಈಗಲೂ ರಸ್ತೆಯ ಇಕ್ಕೆಲಗಳಲ್ಲಿ ಮಾಂಸದ ಮನೆ ಕಣ್ಣಿಗೆ ಬಿದ್ದರೆ ವಶೀಕರಣಕ್ಕೊಳಗಾದವನಂತೆ ಆ ಮಹಾಮಂದಿರವನ್ನು ಶ್ರದ್ಧೆಯಿಂದ ದರ್ಶಿಸುತ್ತೇನೆ.

ಕುವೆಂಪು ಅವರನ್ನು ಸಮಗ್ರವಾಗಿ ಓದಲು ಹೋದಾಗ, 'ನೆನಪಿನ ದೋಣಿಯಲ್ಲಿ' ಬಂದ, ಅವರು ತಿಂದ ಭೂಚರ ಮತ್ತು ಜಲಚರಗಳ ಪಟ್ಟಿಯನ್ನು ನೋಡಿ ಹೌಹಾರಿ, ನಾನೂ ಕಾರ್ಯೋನ್ಮುಖನಾಗಬೇಕೆಂದು ನಿಶ್ಚಯಿಸಿದ್ದೇನೆ. 'ಕಾನೂರು ಹೆಗ್ಗಡತಿ' ಓದಿದಾಗ ಬಾಡುಗಳ್ಳ ಸೋಮನೂ ಮನಸ್ಸಿನಲ್ಲಿ ಜಾಗ ಪಡೆದಿದ್ದಾನೆ. 'ಕೊಂದ ಪಾಪ ತಿಂದಮೇಲೆ ಪರಿಹಾರ' ಎಂಬ ನೆಪವಿಟ್ಟುಕೊಂಡು, ಇಲ್ಲಿಯವರೆಗೂ ತರಹೇವಾರಿ ಪ್ರಾಣಿಗಳನ್ನ ಭುಜಿಸಿದ್ದೇನೆ. ಈಚೆಗೆ ಕರ್ನಾಟಕದ ಮಾಜಿ ಮುಖ್ಯಮಂತ್ರಿಯವರು ಮಾಂಸದೂಟ ಉಂಡು ದೇವಾಲಯ ಪ್ರವೇಶ ಮಾಡಿದ್ದು ಸಾರ್ವಜನಿಕ ಚರ್ಚೆಗೆ ಬಂದಿರುವುದನ್ನು ನೋಡುತ್ತಿದ್ದರೆ — ನಮ್ಮೂರಿನ ಕಾಶಮ್ಮ, ಕರಿಯಮ್ಮ ಮತ್ತು ಮಾರಮ್ಮ ಇವರುಗಳ ಸದಾಶೀರ್ವಾದ ನನ್ನ ಮೇಲಿರಲಿ ಎಂಬುದೇ ಈ ಜನ್ಮದ ಪ್ರಾರ್ಥನೆ. ●